# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 1083 |
| ಉತ್ತರಿಸುವ ದಿನಾಂಕ | 18-12-2024 |
| ಮಾನ್ಯ ಸದಸ್ಯರ ಹೆಸರು | ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದ ಉಪನೋಂದಣಿ ಕಛೇರಿಗಳಲ್ಲಿ ಸ್ಥಿರಾಸ್ತಿ ದಸ್ತಾವೇಜುಗಳ ನೋಂದಣಿಗೆ ಡಿಜಿಟಲ್ ಖಾತಾ (ಇ-ಖಾತಾ)ಕಡ್ಡಾಯ ಮಾಡಿದ ಪರಿಣಾಮ ಜನತೆ ಜೊತೆಗೆ ಸರ್ಕಾರದ ಖಜಾನೆಗೂ ನಷ್ಟ ಉಂಟಾಗಿ ಶೇ.60% ರಾಜಸ್ವ ಸಂಗ್ರಹ ಕುಸಿತ ಕಂಡಿರುವುದು ನಿಜವೇ; ನಿಜವಿದ್ದಲ್ಲಿ, ಇದನ್ನು ಬಗೆಹರಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು; | ರಾಜ್ಯದಲ್ಲಿ ಇ-ಖಾತಾ ಸಂಬಂಧಿಸಿದಂತೆ, ಅಳವಡಿಕೆಯ ಅನುಷ್ಠಾನ ಈ ರೀತಿಯಾಗಿದೆ.<br><br>ಕೃಷಿ ಜಮೀನಿನ ನೋಂದಣಿಗೆ ಭೂಮಿ ತಂತ್ರಾಂಶದೊಂದಿಗೆ 2006 ರಿಂದಲೇ ಕಾವೇರಿ ತಂತ್ರಾಂಶವನ್ನು ಸಂಯೋಜನೆ ಮಾಡಲಾಗಿರುತ್ತದೆ.<br><br>ಜಮೀನಿನ ಸರ್ವೆ ನಕ್ಷೆ (ಸ್ಕೆಚ್) - ನಮೂನೆ-11ಇ ಇರುವ ಮೋಜಿಣಿ ತಂತ್ರಾಂಶದೊಂದಿಗೆ ಕಾವೇರಿ ತಂತ್ರಾಂಶವನ್ನು ದಿನಾಂಕ: 05-10-2016 ರಿಂದಲೇ ಸಂಯೋಜನೆ ಮಾಡಲಾಗಿದೆ.<br><br>ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೃಷಿಯೇತ್ತರ ಸ್ವತ್ತುಗಳ ದಸ್ತಾವೇಜುಗಳ ನೋಂದಣಿಗಾಗಿ ಇ-ಖಾತೆಗೆ ಇ-ಸ್ವತ್ತು ತಂತ್ರಾಂಶವನ್ನು ಕಾವೇರಿ ತಂತ್ರಾಂಶದೊಂದಿಗೆ ದಿನಾಂಕ:18-07-2014ರ ಸುತ್ತೋಲೆಯಲ್ಲಿ ಸಂಯೋಜನೆಗೊಳಿಸಲಾಗಿದೆ.<br><br>ರಾಮನಗರ ಮತ್ತು ಕನಕಪುರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಸ್ವತ್ತುಗಳ ದಸ್ತಾವೇಜುಗಳ ನೋಂದಣಿಗಾಗಿ ಇ-ಆಸ್ತಿ ತಂತ್ರಾಂಶವನ್ನು ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಾವೇರಿ-2 ತಂತ್ರಾಂಶದೊಂದಿಗೆ ಪ್ರಾಯೋಗಿಕವಾಗಿ ದಿನಾಂಕ: 29-01-2020 ರಂದು ಜೋಡಣೆ / ಸಂಯೋಜನೆ ಮಾಡಿ ಆದೇಶ ಹೊರಡಿಸಲಾಗಿದೆ.<br><br>ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಾವೇರಿ ತಂತ್ರಾಂಶದೊಂದಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಇ-ಖಾತೆಗಳಿಗೆ ಇ-ಆಸ್ತಿ ತಂತ್ರಾಂಶವನ್ನು ಇ-ಖಾತಾ ಪಡೆಯಲು ಪ್ರಾಯೋಗಿಕವಾಗಿ 11 ವಾರ್ಡ್‌ಗಳಲ್ಲಿ ದಿನಾಂಕ:25/10/2021 ರಿಂದ |

| | | |
|---|---|---|
| | | ಹಾಗೂ 30 ವಾರ್ಡ್‌ಗಳಲ್ಲಿ ದಿನಾಂಕ:30-04-2022 ರಿಂದ ಇ-ಖಾತಾ ಪಡೆಯಲು ದಿನಾಂಕ:30/04/2022 ರಿಂದ ಜೋಡಣೆ ಮಾಡಲಾಗಿರುತ್ತದೆ.<br><br>ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಾವೇರಿ-2 ತಂತ್ರಾಂಶದೊಂದಿಗೆ ULMS ಇ-ಖಾತ ತಂತ್ರಾಂಶವನ್ನು ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸ್ವತ್ತುಗಳಿಗೆ ಸಂಯೋಜನೆಗೊಳಿಸಲು ದಿನಾಂಕ: 16/08/2024 ರಿಂದ ಜಾರಿಗೆ ತರಲಾಗಿದೆ.<br><br>ಸ್ವತ್ತುಗಳಿಗೆ ಇ-ಆಸ್ತಿ ಖಾತಾ ಇಲ್ಲದಿದ್ದಲ್ಲಿ ಅಥವಾ ನೋಂದಣಿ ಮತ್ತು ಮುದ್ರಾಂಕ ಶುಲ್ಕ ವಂಚನೆ ಮಾಡಬೇಕಿದ್ದಲ್ಲಿ ಸಾರ್ವಜನಿಕರು ಸಂಯೋಜನೆಯೇತರ ನೋಂದಣಿಯ ಮಾದರಿಯನ್ನು ಆಯ್ಕೆ ಮಾಡಿಕೊಂಡು ದಸ್ತಾವೇಜನ್ನು ನೋಂದಾಯಿಸಿಕೊಳ್ಳಲು ಇರುವ ಅವಕಾಶವನ್ನು ದುರುಪಯೋಗ ಪಡಿಸಿಕೊಂಡು ಕಾವೇರಿ ತಂತ್ರಾಂಶದಲ್ಲಿ ಸ್ವತ್ತಿನ ಸ್ವರೂಪವನ್ನು "ಇತರೆ" ಎಂದು ಆಯ್ಕೆ ಮಾಡಿಕೊಂಡು ಕೆಲವು ಕಛೇರಿಗಳಲ್ಲಿ ಕ್ರಮಬದ್ಧವಲ್ಲದ ಸ್ವತ್ತುಗಳ ನಕಲಿ ಖಾತೆಗಳನ್ನು ಸೃಜಿಸಿ ವಂಚನೆಯಿಂದ ನೋಂದಣಿ ಮಾಡಲಾಗುತ್ತಿರುವುದು ಕಂಡು ಬಂದಿರುವುದರಿಂದ ಹಾಗೂ ಸ್ಥಿರಾಸ್ತಿಗಳಿಗೆ ಸಂಬಂಧಿಸಿದ ದಸ್ತಾವೇಜುಗಳನ್ನು ಸ್ವತ್ತನ್ನು ಗುರುತಿಸಬಲ್ಲ ವಿವರಣೆ ಇಲ್ಲದ ಹೊರತು ನೋಂದಣಿಗೆ ಸ್ವೀಕರಿಸಬಾರದೆಂದು ನೋಂದಣಿ ಕಾಯ್ದೆ 1908ರ ಕಲಂ 21ರಲ್ಲಿ ಅವಕಾಶ ಕಲ್ಪಿಸಿರುವುದರಿಂದ, ಇ-ಖಾತೆಯಲ್ಲಿ ಮಾತ್ರ ಸ್ವತ್ತಿನ ಪಿಐಡಿ ಸಂಖ್ಯೆ ಸಂಯೋಜನೆಯಿಂದ ಲಭ್ಯವಾಗುವುದರಿಂದ ಹಾಗೂ ಮಾಹಿತಿ/ ದಾಖಲಾಗಿ/ಅಧಿಕೃತ ಬಲ್ಲಮೂಲಗಳಿಂದ ಬರುವುದರಿಂದ ಕಾವೇರಿ-2.0 ತಂತ್ರಾಂಶದಲ್ಲಿ ಕೃಷಿಯೇತರ ಸ್ವತ್ತುಗಳನ್ನು ಒಳಗೊಂಡಿರುವ ದಸ್ತಾವೇಜುಗಳಿಗೆ ಕಡ್ಡಾಯವಾಗಿ ಇ-ಸ್ವತ್ತು ಅಥವಾ ಇ-ಆಸ್ತಿ ತಂತ್ರಾಂಶಗಳಿಂದ ಮಾಹಿತಿ ಪಡೆದು ನೋಂದಾಯಿಸಲು ಹಾಗೂ ಸಂಯೋಜನೆಯೇತರ ವಿಧಾನದಲ್ಲಿ ನೋಂದಣಿಯನ್ನು ನಿಲ್ಲಿಸುವ ನಿಟ್ಟಿನಲ್ಲಿ ಹಾಗೂ ಇ-ಆಸ್ತಿ ತಂತ್ರಾಂಶವನ್ನು ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಾವೇರಿ-2 |

ತಂತ್ರಾಂಶದೊಂದಿಗೆ ಸಂಯೋಜಿಸಿ ಈಗಾಗಲೇ ಜಾರಿಯಲ್ಲಿರುವ 41 ವಾರ್ಡ್‌ಗಳೊಂದಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ವಾರ್ಡ್‌ಗಳಿಗೂ ಸಹ ದಿನಾಂಕ: 30/09/2024ರಿಂದ ಹಂತ ಹಂತವಾಗಿ ಜಾರಿಗೆ ಬರುವಂತೆ ಅನುಷ್ಠಾನಗೊಳಿಸಲಾಗಿದೆ.

ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಸ್ಥಿರಾಸ್ತಿಗಳ ನೋಂದಣಿಗೆ ಇ-ಆಸ್ತಿ ತಂತ್ರಾಂಶವನ್ನು ಕಾವೇರಿ-2 ತಂತ್ರಾಂಶದೊಂದಿಗೆ ರಾಜ್ಯದ 4 ಜಿಲ್ಲೆಗಳನ್ನು ದಿನಾಂಕ:09-09-2024 ರಿಂದ ಜಾರಿಗೆ ಬರುವಂತೆ ಮತ್ತು ರಾಜ್ಯದ 08 ಜಿಲ್ಲೆಗಳನ್ನು ದಿನಾಂಕ:23/09/2024ರಿಂದ ಜಾರಿಗೆ ಬರುವಂತೆ ಹಾಗೂ ಇನ್ನುಳಿದ 18 ಜಿಲ್ಲೆಗಳನ್ನು ದಿನಾಂಕ: 07/10/2024ರಿಂದ ಜಾರಿಗೆ ಬಂದಿರುತ್ತದೆ.

ಭೌತಿಕ ಖಾತೆ ಬಳಸಿ ನೋಂದಣಿ ಮಾಡುತ್ತಿದ್ದ ಸಂದರ್ಭದಲ್ಲಿ ಸುಳ್ಳು ಗುರುತಿನ ಚೀಟಿ ಸೃಷ್ಟಿಸಿಕೊಂಡು, ಸುಳ್ಳು PID ಸಂಖ್ಯೆ ಸೃಷ್ಟಿಸಿ ಸರ್ಕಾರಿ ಆಸ್ತಿ, ಅಮಾಯಕರ ಆಸ್ತಿಗಳನ್ನು ಬೇರೊಬ್ಬರ ಹೆಸರಿಗೆ ನೋಂದಣಿಯಾಗುತ್ತಿದ್ದ Impersonation, ವಂಚನೆ ನೊಂದಣಿಗಳನ್ನು ಪ್ರಕರಣಗಳನ್ನು, ನೊಂದಣಿ ಮತ್ತು ಮುದ್ರಾಂಕ ಶುಲ್ಕ ವಂಚನೆಯನ್ನು ಹಾಗೂ ಕಾನೂನುಬದ್ಧವಲ್ಲದ ನೋಂದಣಿಗಳನ್ನು ತಡೆಗಟ್ಟಲಾಗಿದೆ.

ಇ-ಖಾತಾ ಸಂಯೋಜನೆಯ ನಂತರ ಕಾನೂನು ಬಾಹಿರ ಮತ್ತು ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿಕೊಂಡು ನೋಂದಣಿ ಮಾಡಿಸಿಕೊಳ್ಳುತ್ತಿದ್ದ ದಸ್ತಾವೇಜುಗಳ ಸಂಖ್ಯೆ ಕಡಿಮೆಯಾಗಿದಿಯೇ ಹೊರತು ನೈಜ ದಸ್ತಾವೇಜುಗಳ ನೋಂದಣಿ ಕಡಿಮೆಯಾಗಿರುವುದಿಲ್ಲ. ಆದ್ದರಿಂದ ನಿಯಮ ಬಾಹಿರ ನೋಂದಣಿಯಿಂದ ಬರುತ್ತಿದ್ದ ರಾಜಸ್ವ ಕಡಿಮೆಯಾಗಿದಿಯೇ ಹೊರತು ಕಾನೂನು ಬದ್ಧವಾಗಿ ನೈಜವಾದ ಆಸ್ತಿ ನೋಂದಣಿಯಿಂದ ಸರ್ಕಾರಕ್ಕೆ ಯಾವುದೇ ಆದಾಯ ನಷ್ಟ ಉಂಟಾಗಿರುವುದಿಲ್ಲ.

2023-2024ನೇ ಸಾಲಿನಲ್ಲಿ ಏಪ್ರಿಲ್ ನಿಂದ ನವೆಂಬರ್ ವರೆಗೆ ರೂ.12488.89 ಕೋಟಿಗಳು

| | | |
|---|---|---|
| | | ರಾಜಸ್ವ ಸಂಗ್ರಹಣೆಯಾಗಿತ್ತು. 2024-2025ನೇ ಸಾಲಿನಲ್ಲಿ ಏಪ್ರಿಲ್ ನಿಂದ ನವೆಂಬರ್‌ವರೆಗೆ ರೂ.15145.32 ಕೋಟಿಗಳು ವಸೂಲಾತಿಯಾಗಿರುತ್ತದೆ. ಕಳೆದ ವರ್ಷಕ್ಕೆ ಹೋಲಿಸಿದಲ್ಲಿ ರೂ.2656.43 ಕೋಟಿಗಳಷ್ಟು ಹೆಚ್ಚು ರಾಜಸ್ವ ಸಂಗ್ರಹವಾಗಿರುತ್ತದೆ. |
| ಆ | ಕಳೆದ ಒಂದು ವರ್ಷದಲ್ಲಿ ಖಜಾನೆಗೆ ರಿಜಿಸ್ಟ್ರೇಷನ್ ಮತ್ತು ರಾಜಸ್ವ ಸಂಗ್ರಹವಾಗಿರುವ ಮೊತ್ತವೆಷ್ಟು; (ಸಂಗ್ರಹವಾದ ಮೊತ್ತದ ತಿಂಗಳುಗಳವಾರು ವಿವರ ನೀಡುವುದು) | ವಿವರಗಳನ್ನು ಅನುಬಂಧದಲ್ಲಿ ನೀಡಿದೆ |
| ಇ | ಇ-ಖಾತಾ ಸಾಫ್ಟ್‌ವೇರ್‌ನ ನಿರ್ವಹಣೆಗಾಗಿ ಯಾವ ಕಂಪನಿಗೆ ಜವಬ್ದಾರಿಯನ್ನುನೀಡಲಾಗಿದೆ; ಎಷ್ಟು ಮೊತ್ತಕ್ಕೆ ಮತ್ತು ಎಷ್ಟು ಅವಧಿಗೆ ಗುತ್ತಿಗೆಯನ್ನು ನೀಡಲಾಗಿದೆ? (ವಿವರ ನೀಡುವುದು) | 1) ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅನುಷ್ಠಾನಗೊಳಿಸಿರುವ ಇ-ಆಸ್ತಿ ತಂತ್ರಾಂಶವನ್ನು National Information Centre (NIC) ಸಂಸ್ಥೆಯು ಅಭಿವೃದ್ಧಿಪಡಿಸಿ ನಿರ್ವಹಿಸುತ್ತಿದೆ. ದಿನಾಂಕ: 28-02-2023 ರಲ್ಲಿ ನೀಡಲಾಗಿರುವ ಕಾರ್ಯಾದೇಶದನ್ವಯ ಗುತ್ತಿಗೆ ಅವಧಿಯು 03 ವರ್ಷವಿದ್ದು, ಮೊದಲನೇ ವರ್ಷಕ್ಕೆ ರೂ.37,18,698/, 2ನೇ ವರ್ಷಕ್ಕೆ ರೂ.28,24,000/- ಮತ್ತು 3ನೇ ವರ್ಷಕ್ಕೆ ರೂ.32,00,000/- ಅನ್ನು ನಿಗದಿಪಡಿಸಲಾಗಿದೆ.<br><br>2) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಇ-ಖಾತಾ ತಂತ್ರಾಂಶದ ಅಭಿವೃದ್ಧಿ ಮತ್ತು ನಿರ್ವಹಣೆಯನ್ನು ನಗರಾಭಿವೃದ್ಧಿ ಇಲಾಖೆಯ ನಿರ್ದೇಶನದಂತೆ National Information Centre (NIC) ಸಂಸ್ಥೆಗೆ ನೀಡಲಾಗಿರುತ್ತದೆ.<br><br>ಎನ್.ಐ.ಸಿ (NIC) ಸಂಸ್ಥೆಯು ಬಿ.ಬಿ.ಎಂ.ಪಿ.ಗೆ ಅನ್ವಯವಾಗುವಂತೆ ಸೂಕ್ತ ಮಾರ್ಪಾಡಿನೊಂದಿಗೆ ತಂತ್ರಾಂಶವನ್ನು ಅಭಿವೃದ್ಧಿಪಡಿಸಲು ಹಾಗೂ ನಿರ್ವಹಿಸಲು ಯೋಜನಾ ಪ್ರಸ್ತಾವನೆಯಲ್ಲಿ ವಾರ್ಷಿಕ ರೂ. 96,00,000/- ಗಳನ್ನು ಪಾವತಿಸಲು ಕೋರಲಾಗಿತ್ತು. ತದನಂತರ ಇ-ಆಸ್ತಿ ತಂತ್ರಾಂಶವನ್ನು ಪಾಲಿಕೆಯಲ್ಲಿ ಹಂತ ಹಂತವಾಗಿ ಅನುಷ್ಠಾನಗೊಳಿಸಲಾಗುತ್ತಿದ್ದ ಹಿನ್ನೆಲೆಯಲ್ಲಿ ಸದರಿ ಮೊತ್ತವನ್ನೇ (NIC) ಸಂಸ್ಥೆಯು ತಹಲ್ ವರೆಗೂ ಉಪಯೋಗಿಸಿಕೊಂಡು ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ನಿರ್ವಹಿಸಲಾಗುತ್ತಿರುತ್ತದೆ. |

| | | |
|---|---|---|
| | | ಪ್ರಸ್ತುತ ದಿನಾಂಕ:08-10-2024 ರಂದು Invoice ಸಲ್ಲಿಸಿ, ಮುಂದಿನ 03 ವರ್ಷಗಳ ಅವಧಿಗೆ ಇ-ಆಸ್ತಿ ತಂತ್ರಾಂಶದಲ್ಲಿ ಹೆಚ್ಚಿನ ಅಭಿವೃದ್ಧಿ ಹಾಗೂ ನಿರ್ವಹಣೆಗೊಳಿಸುವ ಸಂಬಂಧ ರೂ. 96,00,000/- ಗಳನ್ನು ಪಾವತಿಸುವಂತೆ Invoice ಬಿಲ್ಲನ್ನು ಸಲ್ಲಿಸಿರುತ್ತಾರೆ.<br><br>ಮುಂದುವರೆದು, ಎನ್.ಐ.ಸಿ (NIC) ಸಂಸ್ಥೆಯು ಕೇಂದ್ರ ಸರ್ಕಾರದ ವಿದ್ಯುನ್ಮಾನ್ ಮತ್ತು ಮಾಹಿತಿ ತಂತ್ರಜ್ಞಾನದ ಮಂತ್ರಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುವ ಸಂಸ್ಥೆಯಾಗಿದ್ದು, ನಗರಾಭಿವೃದ್ಧಿ ಇಲಾಖೆಯ ನಿರ್ದೇಶನದಂತೆ, ಯೋಜನಾ ಪ್ರಸ್ತಾವನೆಯ ಮೇರೆಗೆ ಇ-ಆಸ್ತಿ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ನಿರ್ವಹಿಸಲು ಸದರಿ ಸಂಸ್ಥೆಗೆ ನೀಡಲಾಗಿದೆ. |

ಕಂಇ/235/ಎಂಎನ್ಎಸ್ಎ/2024

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

# ಅನುಬಂಧ

| ಕ್ರ.ಸಂ. | ಮಾಹೆ | 2023-24 ಸಂಗ್ರಹಣೆಯಾದ ರಾಜಸ್ವ (ರೂ.ಕೋಟಿಗಳಲ್ಲಿ) | 2024-25 ಸಂಗ್ರಹಣೆಯಾದ ರಾಜಸ್ವ (ರೂ.ಕೋಟಿಗಳಲ್ಲಿ) |
|---|---|---|---|
| 1 | ಏಪ್ರಿಲ್ | 1,272.47 | 1,709.00 |
| 2 | ಮೇ | 1,352.07 | 2,027.73 |
| 3 | ಜೂನ್ | 1,394.73 | 1,899.85 |
| 4 | ಜುಲೈ | 1,464.60 | 2,027.47 |
| 5 | ಆಗಸ್ಟ್ | 1,879.47 | 2,221.52 |
| 6 | ಸೆಪ್ಟೆಂಬರ್ | 2,055.86 | 2,104.39 |
| 7 | ಅಕ್ಟೋಬರ್ | 1,605.03 | 1,889.51 |
| 8 | ನವೆಂಬರ್ | 1,464.66 | 1,265.85 |
| 9 | ಡಿಸೆಂಬರ್ | 1,859.62 | |
| 10 | ಜನವರಿ | 1,520.67 | |
| 11 | ಫೆಬ್ರುವರಿ | 1,945.54 | |
| 12 | ಮಾರ್ಚ್ | 2,472.58 | |
| | ಒಟ್ಟು | **20,287.30** | **15,145.32** |

**2024-25ನೇ** ಸಾಲಿನ **ಏಪ್ರಿಲ್ ನಿಂದ ನವೆಂಬರ್ ವರೆಗೆ ರೂ.15,145.32 ಕೋಟಿಗಳಷ್ಟು** ರಾಜಸ್ವ ಸಂಗ್ರಹಣೆಯಾಗಿದ್ದು, ಕಳೆದ ಸಾಲಿನಲ್ಲಿ **(2023-24)** ಇದೇ ಅವಧಿಗೆ **ರೂ.12,488.89 ಕೋಟಿಗಳಷ್ಟು** ರಾಜಸ್ವ ಸಂಗ್ರಹಣೆಯಾಗಿದ್ದು, **ರೂ.2,656.43 ಕೋಟಿಗಳ** ಅಧಿಕವಾದ ರಾಜಸ್ವವನ್ನು ಪ್ರಸಕ್ತ ಸಾಲಿನಲ್ಲಿ ಸಂಗ್ರಹಿಸಲಾಗಿರುತ್ತದೆ.

**2023-24ನೇ** ಸಾಲಿನಲ್ಲಿ **ಡಿಸೆಂಬರ್** ನಿಂದ **ಮಾರ್ಚ್** ಅಂತ್ಯದವರೆಗೆ **ರೂ.7,798.41** ಕೋಟಿಗಳಷ್ಟು ರಾಜಸ್ವವನ್ನು ಸಂಗ್ರಹಿಸಲಾಗಿದೆ. **2023-24 ನೇ** ಸಾಲಿನಲ್ಲಿ **ಏಪ್ರಿಲ್** ನಿಂದ **ಮಾರ್ಚ್** ಅಂತ್ಯದವರೆಗೆ **ರೂ.20,287.30 ಕೋಟಿಗಳಷ್ಟು** ರಾಜಸ್ವವನ್ನು ಸಂಗ್ರಹಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ (2024-25)ರಲ್ಲಿ ಕಳೆದ ಸಾಲಿಗಿಂತ **ಹೆಚ್ಚು ರಾಜಸ್ವವು ಸಂಗ್ರಹವಾಗುವ ನಿರೀಕ್ಷೆ ಇದೆ.**

Inspector General of Registration
and Commissioner of Stamps